**ಓ.ಎಸ್. ನಂಬರ್ಃ 19/2023** **ಪಿಡಬ್ಲೂಃ 1**

ದಿಃ 08-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ** ಃ ವಾದಿ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯದಿಂದ ಕೂಡಿದ್ದು ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಈ ದಿನ ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ.

1. ದಾವಾ ಸ್ವತ್ತಿಗೆಸಂಬಂದಿಸಿದ ಸರ್ವೆ ನಂ. 189/1ನೇದ್ದರ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 1 ಎಂದು ಗುರುತಿಸಲಾಯಿತು.
2. FDP No.1/2011 ನಲ್ಲಿನ ಅರ್ಜಿಯ ನಕಲು ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 2 ಎಂದು ಗುರುತಿಸಲಾಯಿತು.
3. FDP No. 1/2011 ರಲ್ಲಿನ ಅಂತಿಮ ಡಿಕ್ರಿಯ ನಕಲು ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 3 ಎಂದು ಗುರುತಿಸಲಾಯಿತು.
4. FDP No. 1/2011 ರಲ್ಲಿನ ಕಮಿಷಿನರ್ ವರದಿ, ಪಂಚನಾಮೆ ಹಾಗೂ ನಕ್ಷೆಯ ನಕಲು ಪ್ರತಿಯನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ ಪಿ 4 ರಿಂದ 6 ಎಂದು ಗುರುತಿಸಲಾಯಿತು.
5. RA No.10/2010 ರಲ್ಲಿನ ಮೇಲ್ಮನವಿಯ ನಕಲು ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 7 ಎಂದು ಗುರುತಿಸಲಾಯಿತು.
6. RA No.10/2010 ರಲ್ಲಿನ ಪ್ರಾಥಮಿಕ ಡಿಕ್ರಿಯ ನಕಲು ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ ಪಿ 8 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಸಲ್ಲಿಸಿದ ವಾದ ಪತ್ರ ಮತ್ತು ದಾಖಲೆಗಳನ್ನು ಪರಿಗಣಿಸಿ ನನ್ನ ದಾವೆಯಲ್ಲಿ ಕೇಳಿದಂತೆ ದಾವೆಯನ್ನು ಡಿಕ್ರಿ ಮಾಡಲು ಪ್ರಾರ್ಥನೆ.

**<u>ಪಾಟೀಸವಾಲು</u>** ಃ ವಾದಿ ಪರ ಶ್ರೀ ಎ ಬಿ ಎಂ ವಕೀಲರಿಂದಃ ಪ್ರತಿವಾದಿ ಪರ ವಕೀಲರು ಪಾಟಿ ಸವಾಲಿಗೆ

ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

ಮರುವಿಚಾರಣೆಃ ಇಲ್ಲ
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವನ್ನು ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯವನ್ನು ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.)